ಊ) ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ನಗರಮಾಪನ ಅಗಿರುವ ನಗರ : ಪಟ್ಟಣಗಳ ಪಟ್ಟಿ :-

ಬೆಂಗಳೂರು ವಿಭಾಗ – 3 :-

1. ಬೆಂಗಳೂರು ನಗರ 2. ಕೆ.ಜಿ.ಎಫ್. 3. ದಾವಣಗೆರೆ

ಮೈಸೂರು ವಿಭಾಗ – 1

1. ಮೈಸೂರು

ಬೆಳಗಾಂ ವಿಭಾಗ :- 42

1. ಬೆಳಗಾವಿ
2. ಸಂಕೇಶ್ವರ
3. ಹುಕ್ಕೇರಿ
4. ಬೈಲಹೊಂಗಲ
5. ಸವದತ್ತಿ
6. ಗೋಕಾಕ್
7. ರಾಮದುರ್ಗ
8. ಚಿಕ್ಕೋಡಿ
9. ನಿಪ್ಪಾಣಿ
10. ಅಥಣಿ
11. ಬಿಜಾಪುರ
12. ತಾಳಿಕೋಟೆ
13. ಮುದ್ದೇಬಿಹಾಳ
14. ಬಸವನಬಾಗೇವಾಡಿ
15. ಜಮಖಂಡಿ
16. ರಬಕವಿ ಬಣಹಟ್ಟಿ
17. ಮಹಲಿಂಗಪುರ
18. ಮುಧೋಳ
19. ಬಾಗಲಕೋಟೆ
20. ಗುಳೇದಗುಡ್ಡ
21. ಬಾದಾಮಿ
22. ಹುನಗುಂದ
23. ಇಳಕಲ್
24. ಇಂಡಿ
25. ಧಾರವಾಡ
26. ಹುಬ್ಬಳ್ಳಿ
27. ನವಲಗುಂದ
28. ಮೊರಬ
29. ಅಣ್ಣಿಗೇರಿ
30. ಉಪ್ಪಿನ ಬೆಟಗೇರಿ
31. ಗದಗ – ಬೆಟಗೇರಿ
32. ನರಗುಂದ
33. ರೋಣ
34. ಕುಂದಗೋಳ
35. ಲಕ್ಷ್ಮೇಶ್ವರ
36. ಹಾವೇರಿ
37. ಬ್ಯಾಡಗಿ
38. ರಾಣಿಬೆನ್ನೂರು
39. ಕಾರವಾರ
40. ಹಳಿಯಾಳ
41. ಹೊನ್ನಾವರ
42. ಸಿರಸಿ

ಗುಲ್ಬರ್ಗಾ ವಿಭಾಗ :- 2

1. ಗುಲ್ಬರ್ಗ 2. ಬಳ್ಳಾರಿ

ರಾಜ್ಯದಲ್ಲಿ ಆರ್.ಐ.ಡಿ.ಎಫ್.–9ರ ಅಡಿಯಲ್ಲಿ ರಸ್ತೆಗಳ ಅಯ್ಕೆ ಮಾಡುವುದು

4330(5238) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆರ್.ಐ.ಡಿ.ಎಫ್. 9ರ ಅಡಿಯಲ್ಲಿ ರಸ್ತೆಗಳ ಆಯ್ಕೆ ಮಾಡಲಾಗಿದೆಯೇ ;

ಆ) ಹಾಗಿದ್ದಲ್ಲಿ, ತುರುವೇಕೆರೆ ತಾಲ್ಲೂಕಿಗೆ ಆರ್.ಐ.ಡಿ.ಎಫ್. 9 ರಲ್ಲಿ ಯಾವ ರಸ್ತೆಯನ್ನು ಆಯ್ಕೆ ಮಾಡಲಾಗಿದೆ ;

ಇ) ಅನುಮತಿ ದೊರಕಿದ್ದರೆ ಕೆಲಸ ಎಂದಿನಿಂದ ಪ್ರಾರಂಭ ಮಾಡಲಾಗುವುದು ;

ಈ) ಅಂದಾಜು ಎಷ್ಟು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಡಿ ಯಾವುದೇ ಕಾಮಗಾರಿಯನ್ನು ಇನ್ನೂ ಆಯ್ಕೆ ಮಾಡಲಾಗಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅರಣ್ಯವನ್ನು ಅಭಿವೃದ್ಧಿ ಪಡಿಸುವುದು

4331(5239) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ 4 ವರ್ಷಗಳಿಂದ ಅರಣ್ಯ ನಾಶದಿಂದ ಬರಗಾಲ ಬಂದಿರುವುದು ನಿಜವೇ :

ಆ) ಇತ್ತೀಚೆಗೆ ಕಾಡನ್ನು ವಿಪರೀತವಾಗಿ ಕಡಿದು ಹಾಳು ಮಾಡುತ್ತಿರುವುದು ನಿಜವೇ ;

ಇ) ಮರಗಳನ್ನು ಕಡಿಯಲು ಯಾವ ನಿಬಂಧನೆ ಹಾಕಿಕೊಳ್ಳಲಾಗಿದೆ ;

ಈ) ಕಡಿದ ಮರಗಳ ಜಾಗದಲ್ಲಿ ಹೊದಾಗಿ ಮರಗಳನ್ನು ಬೆಳೆಸಲು ಯಾವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ :

ಉ) ವನಸಂಪತ್ತು ಮಾಡಲು ಹೊಸ ಹೊಸ ಯೋಜನೆಗಳನ್ನು ರೂಪಿಸಲಾಗಿದೆಯೇ ;

ಊ) ಹಾಗಿದ್ದಲ್ಲಿ, ಕಾಡುಗಳನ್ನು ಬೆಳೆಸಲು ಹೇರಳವಾಗಿ ಖರ್ಚು ಮಾಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ನಿಜವಲ್ಲ.

ಆ) ನಿಜವಲ್ಲ.

ಇ) ಅರಣ್ಯದಲ್ಲಿ ಮರಗಳನ್ನು ಕಡಿಯಲು ಸರ್ಕಾರದ ಆದೇಶ ಸಂಖ್ಯೆ: ಎಫ್ಇಇ 101 ಎಫ್ಎಪಿ 2001 ದಿನಾಂಕ: 23-10-2002 ರಂತೆ ನಿಬಂಧನೆಗಳನ್ನು ಹಾಕಿಕೊಳ್ಳಲಾಗಿದೆ.

ವಿವರಗಳನ್ನು ಲಗತ್ತಿಸಿದೆ.

ಈ) ಅರಣ್ಯ ಅಭಿವೃದ್ಧಿ ನಿಧಿ ಶೀರ್ಷಿಕೆ ಅಡಿಯಲ್ಲಿ ಅರಣ್ಯಗಳಲ್ಲಿ ಕಡಿದ ಮರಗಳ ಜಾಗಗಳಲ್ಲಿ ಪುನರುತ್ಪತ್ತಿ (Regeneration) ಹಿತದೃಷ್ಟಿಯಿಂದ ನೆಡುತೋಪುಗಳನ್ನು ಬೆಳೆಸುವ ಯೋಜನೆ ಹಾಕಿಕೊಳ್ಳಲಾಗಿದೆ.

ಉ) ಹೌದು.

ಊ) ರಾಜ್ಯದ ವಾರ್ಷಿಕ ಯೋಜನಾ ಗಾತ್ರಕ್ಕನುಗುಣವಾಗಿ ಅರಣ್ಯ ಇಲಾಖೆಗೆ ಒದಗಿಸಿದ ಆಯವ್ಯಯಕ್ಕೆ ಅನುಗುಣವಾಗಿ ಕಾಡುಗಳನ್ನು ಬೆಳೆಸಲು ಖರ್ಚು ಮಾಡಲಾಗುವುದು. ಪ್ರಸಕ್ತ ವರ್ಷದಲ್ಲಿ ಅರಣ್ಯೀಕರಣಕ್ಕಾಗಿ ಮೀಸಲಿಟ್ಟ ಅನುದಾನ 9,555.83 ಲಕ್ಷ ರೂಪಾಯಿಗಳು.